**Witness is present and duly sworn on 26.10.2024.**

**Further examination in chief for the plaintiff : by Sri. PS counsel for plaintiff :**

I am producing the certified copy of the sale deed dated 15.12.1982 executed by Anjinappa and others in favor of D.R.Jayashree defendant No.15 along with the typed copy and it is marked as **Ex.P.16** and typed copy is marked as **Ex.P.16(a)**.

I am producing the family tree affidavit dated 25.10.2024 and it is marked as **Ex.P.17**.

(Defendant counsel prays time for cross examination. Time granted).

(Computerized to my dictation in the open court as deposed by the witness.)

**R. O. I. & A. C.,**

**(MAMTAZ)**
**IX Addl. C.C. & S.J., Bengaluru.**

**ದಿಃ-04-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿಸವಾಲು ಃ ಪ್ರತಿವಾದಿ ನಂ.16 ಮತ್ತು 17 ರ ಪರ ಶ್ರೀ. ಪಿ.ಎಸ್.ಆರ್ ವಕೀಲರಿಂದ ಃ**

1. ನನ್ನ ತಂದೆಯ ತಂದೆಯ ಹೆಸರು ಸಂಜೀವಪ್ಪ ಎಂದರೆ ಸರಿ. ನನ್ನ ತಾತನಿಗೆ 4 ಗಂಡು ಮಕ್ಕಳು ಮತ್ತು 2 ಹೆಣ್ಣು ಮಕ್ಕಳು

ಇರುತ್ತಾರೆ. ಹೆಣ್ಣು ಮಕ್ಕಳ ಹೆಸರು ಅಕ್ಕಯ್ಯಮ್ಮ ಮತ್ತು ಇನ್ನೊಬ್ಬರ ಹೆಸರು ನನಗೆ ಮರೆತು ಹೋಗಿರುತ್ತದೆ. ಆ 2 ಹೆಣ್ಣು ಮಕ್ಕಳು ಜೀವಂತವಾಗಿಲ್ಲ.

2. ಅಕ್ಕಯ್ಯಮ್ಮನವರಿಗೆ 4 ಹೆಣ್ಣು ಮಕ್ಕಳು ಮತ್ತು 3 ಗಂಡು ಮಕ್ಕಳು. ಅವರ ಹೆಸರು ಸಂಪಂಗಿ, ಚಿನ್ನಪ್ಪ, ಯೋಗೀಶ್, ಚಿನ್ನಮ್ಮ, ವೆಂಕಟಮ್ಮ, ವಸಂತ ಮತ್ತು ರುಕ್ಮಿಣಿ ಆಗಿರುತ್ತದೆ. ಈ ದಾವೆಯನ್ನು ಹೂಡುವ ಮೊದಲು ಅಕ್ಕಯ್ಯಮ್ಮ ಮತ್ತು ಸಂಜೀವಯ್ಯನವರ ಇನ್ನೊಬ್ಬಳು ಮಗಳು ಇರುವ ಬಗ್ಗೆ ನನಗೆ ಗೊತ್ತಿತ್ತು. ಅವರ ವಂಶಸ್ಥರನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಆದರೆ ಈ ದಾವೆಯಲ್ಲಿ ಒಬ್ಬರನ್ನು ಪಕ್ಷಗಾರರನ್ನಾಗಿ ತೋರಿಸಿರುತ್ತೇನೆ. ನಾನು ಅಕ್ಕಯ್ಯಮ್ಮ ಮತ್ತು ಸಂಜೀವಯ್ಯನವರ ಇನ್ನೊಬ್ಬಳು ಮಗಳು ವಂಶಸ್ಥರನ್ನು ಪಕ್ಷಗಾರರನ್ನಾಗಿ ಈ ದಾವೆಯಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ.

3. ನನ್ನ ತಂದೆ ಆಂಜನೇಯಪ್ಪನವರಿಗೆ 4 ಮಂದಿ ಮಕ್ಕಳು, ಒಂದು ಗಂಡು ಮತ್ತು 3 ಹೆಣ್ಣು ಮಕ್ಕಳು. ನನ್ನ ತಂಗಿ ನೀಲಮ್ಮನಿಗೆ ಮದುವೆಯಾಗಿದ್ದು ಆಕೆಯ ಗಂಡ ಮೃತ ಪಟ್ಟಿದ್ದು ಆಕೆಗೆ ಒಬ್ಬಳು ಮಗಳು ಇರುತ್ತಾಳೆ. ನೀಲಮ್ಮ ಬದುಕಿದ್ದಾರೆ. ನನಗೆ ಇನ್ನೊಂದು ತಂಗಿ ಗಿರಿಜಮ್ಮ ಬದುಕಿದ್ದಾರೆ. ಆಕೆಯನ್ನು ಸಹ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

4. ನನ್ನ ತಾತ ಸಂಜೀವಪ್ಪನಿಗೆ ಒಟ್ಟು 4 ಜನ ಗಂಡು ಮಕ್ಕಳು ಅವರ ಹೆಸರು ಆಂಜಿನಪ್ಪ, ಚಿನ್ನಪ್ಪ, ಮುನಿನಂಜಪ್ಪ ಮತ್ತು ಜಯರಾಮಪ್ಪ ಎಂದರೆ ಸರಿ.

5. ದಿನಾಂಕ 15.12.1982 ರಲ್ಲಿ ವಾದ ಪತ್ರದ ಸ್ವತ್ತನ್ನು ಜಯಶ್ರೀ ಎನ್ನುವವರಿಗೆ ಸಂಜೀವಪ್ಪನವರ ಮೇಲಿನ ಎಲ್ಲಾ 4 ಗಂಡು ಮಕ್ಕಳು ಸೇರಿ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಈ ಮಾರಾಟ ಮಾಡಿದ ವಿಚಾರ ನನಗೆ 1982 ನೇ ಇಸವಿಯಲ್ಲಿಯೇ ಗೊತ್ತಿತ್ತು ಎಂದರೆ ಸರಿ. ನಾನು ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪಂದಿರಿಗೆ ಮಾರಾಟ ಮಾಡಿದ ಬಗ್ಗೆ ತಕರಾರನ್ನು 1983 ರಲ್ಲಿ ಮಾಡಿರುತ್ತೇನೆ. 1982 ನೇ ಇಸವಿಯಲ್ಲಿಯೇ ಜಯಶ್ರೀಯವರ ಹೆಸರಿನಲ್ಲಿ ಖಾತೆ ಆಗಿತ್ತು ಎಂದರೆ ಸರಿ.

6. ಜಯಶ್ರೀರವರು 2002 ನೇ ಇಸವಿಯಲ್ಲಿ 2 ಮುನಿಯಪ್ಪ ಮತ್ತು ಇನ್ನೊಂದು ಶಾಮಣ್ಣ ಮತ್ತು ವರಲಕ್ಷ್ಮಿಯವರಿಗೆ ಒಟ್ಟಾಗಿ 3 ಕ್ರಯ ಪತ್ರವನ್ನು ವಾದ ಪತ್ರದ ಸ್ವತ್ತಿಗೆ ಸಂಬಂಧಿಸಿ ಮಾಡಿದ್ದರು ಎಂದರೆ ಅದು ನನಗೆ ಗೊತ್ತಿಲ್ಲ. ಪ್ರಸ್ತುತ ಮುನಿಯಪ್ಪನವರು, ಭಾರತಿ, ಶಾಮಣ್ಣ ಮತ್ತು ವರಲಕ್ಷ್ಮಿಯವರ ಹೆಸರಿನಲ್ಲಿ ಇದೆ ಎಂದರೆ ಸರಿ. ಈ ವಾದ ಪತ್ರದ ಸ್ವತ್ತಿನಲ್ಲಿ ಪ್ರತಿವಾದಿ ನಂ.16 ಮತ್ತು 17 ರವರು ಷೆಡ್ಡುಗಳನ್ನು ಕಟ್ಟಿದ್ದಾರೆ ಎಂದರೆ ಸರಿ. ಅವರು 2002 ನೇ ಇಸವಿಯಲ್ಲಿಯೇ ಅದಕ್ಕೆ ವಿದ್ಯುತ್ ಸಂಪರ್ಕವನ್ನು ಪಡೆದಿದ್ದಾರೆ ಎಂದರೆ ಸರಿ. ಶಾಮಣ್ಣ ಮತ್ತು ವರಲಕ್ಷ್ಮಿಯವರು 2003 ನೇ ಇಸವಿಯಲ್ಲಿ ಭೂ ಪರಿವರ್ತನೆಯನ್ನು ಮಾಡಿದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ.

7. ಸರ್ವೇ 52/4, 14 ಗುಂಟೆ, ಸರ್ವೇ ನಂ.27/1, 1 ಎಕರೆ ಮತ್ತು ಕಾನಿಷ್ಮಾರಿ ನಂ.21/27-12, 20*28 ಸ್ವತ್ತುಗಳು ನಮ್ಮ ಕುಟುಂಬಕ್ಕೆ ಇತ್ತು ಎಂದರೆ ಸರಿಯಲ್ಲ. ನನ್ನ ತಾತನ ಸ್ವತ್ತಿನ ಪಹಣಿ ಮತ್ತು ಖಾತೆ ನನ್ನ ತಾತನ ಹೆಸರಿನಲ್ಲಿಯೇ ಇದೆ ಎಂದರೆ ಸರಿ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**